2 ನೇ ಅಪರ ಜಿಲ್ಲಾ ಮತ್ತು ಸತ್ರ ನ್ಯಾಯಾಧೀಶರವರ ನ್ಯಾಯಾಲಯದಲ್ಲಿ,
ಚಿಕ್ಕಮಗಳೂರು

ಸತ್ರ ಮೊಕದ್ದಮೆ ನಂಃ 9/2021

| | | | |
|---|---|---|---|
| ಸಾಕ್ಷಿದಾರರ ಹೆಸರು | - | ವಿಜಯ್ ಕುಮಾರ್ | ಪಿಡಬ್ಲೂ -1 |
| ತಂದೆಯ ಹೆಸರು | - | ರಾಮಪ್ಪ | ಸಿಡಬ್ಲೂ -2 |
| ವಯಸ್ಸು | - | 40 ವರ್ಷ | |
| ಉದ್ಯೋಗ | - | ಮ್ಯಾನೇಜರ್ | |
| ವಾಸ ಸ್ಥಳ | - | ಬೆಂಗಳೂರು | |

ದಿನಾಂಕಃ 27.02.2023 ರಂದು ಸಾಕ್ಷಿಗೆ ಪ್ರಮಾಣ ವಚನ ಬೋಧಿಸಲಾಯಿತು.

ಮುಖ್ಯ ವಿಚಾರಣೆ : ಸರ್ಕಾರಿ ಅಭಿಯೋಜಕರಿಂದ-

1. ನ್ಯಾಯಾಲಯದಲ್ಲಿ ಹಾಜರಿರುವ ಆರೋಪಿ ಗೊತ್ತು. ಆಕೆ ನಮ್ಮ ಊರಿನವರು ಮತ್ತು ನನ್ನ ತಂದೆಯ ಸ್ನೇಹಿತನ ಸೊಸೆ. ಮೃತ ಪ್ರೀತಮ್ ಗೊತ್ತು, ಆತ ಆರೋಪಿಯ ಮಗ. ಚಾಸಾ.1 ಗೊತ್ತು, ಆಕೆ ಆರೋಪಿಯ ಅತ್ತೆ. ಸಹ ಪಂಚರಾದ ಚಾಸಾ.3 ಮತ್ತು ಚಾಸಾ.4 ಗೊತ್ತಿಲ್ಲ. ಚಾಸಾ.5 ಆರೋಪಿಯ ಮಾವ. ಚಾಸಾ.6 ಆರೋಪಿಯ ಗಂಡ. ಚಾಸಾ.8 ಆರೋಪಿಯ ಭಾವ. ಚಾಸಾ.9 ಆರೋಪಿಯ ಅತ್ತಿಗೆ. ಉಳಿದ ಸಾಕ್ಷಿದಾರರು ಗೊತ್ತಿಲ್ಲ.

2. ಆರೋಪಿ ಮತ್ತು ಚಾಸಾ.6 ರವರಿಗೆ ಇಬ್ಬರು ಮಕ್ಕಳು. ಅವರೆಂದರೆ ಮೊದಲನೇ ಲಿಖಿತ ಮತ್ತು ಎರಡನೇ ಪ್ರೀತಮ್. ಪ್ರೀತಮ್ ಮೃತಪಟ್ಟಾಗ ಆತನಿಗೆ ಮೂರು ತಿಂಗಳು ಆಗಿತ್ತು. 2019 ನೇ ಇಸವಿಯಲ್ಲಿ ಒಂದು ದಿನ ನಾನು ಬೆಂಗಳೂರಿನಲ್ಲಿ ಇದ್ದೆನು. ಆಗ ನನ್ನ ತಂದೆ ನನಗೆ ಫೋನ್ ಮಾಡಿ ಆರೋಪಿಯ ಮಗು ಪ್ರೀತಮ್ ಮೃತಪಟ್ಟಿದ್ದು ಆತನನ್ನು ತರೀಕೆರೆಯ ಸರ್ಕಾರಿ

ಆಸ್ಪತ್ರೆಯಲ್ಲಿ ಇರಿಸಿರುವುದಾಗಿ ತಿಳಿಸಿದರು. ನಂತರ ನಾನು ಸಂಜೆ 6.00 ಗಂಟೆ ಸುಮಾರಿಗೆ ತರೀಕೆರೆ ಸರ್ಕಾರಿ ಆಸ್ಪತ್ರೆಗೆ ಹೋದೆನು. ನಾನು ಅಲ್ಲಿಗೆ ಹೋದಾಗ ತರೀಕೆರೆ ಸಿ ಪಿ ಐ ಮತ್ತು ಇತರೆ ಪೊಲೀಸರು ಮತ್ತು ಚಾಸಾ.1 ರತ್ನಮ್ಮರವರು ಇದ್ದರು. ನಾನು ಅಲ್ಲಿಗೆ ಹೋದಾಗ ಆರೋಪಿಯ ಮಗು ಪ್ರೀತಮ್ ನನ್ನು ಬೆಟ್ಟದತಾವರೆಕೆರೆ ಭದ್ರಾ ನಾಲೆಗೆ ಹಾಕಿ ಮೃತಪಟ್ಟಿರುವುದಾಗಿ ತಿಳಿಯಿತು. ಅಲ್ಲಿ ಪೊಲೀಸರು ಹೇಳಿದ ಮೇರೆಗೆ ಸಹಿ ಮಾಡಿದ್ದೇನೆ.

3. ಮಗು ಪ್ರೀತಮ್ ಭದ್ರಾ ನಾಲೆಗೆ ಹೇಗೆ ಬಿದ್ದಿತು ಮತ್ತು ಅದರ ಸಾವಿಗೆ ಯಾರು ಕಾರಣರೆಂದು ನನಗೆ ಗೊತ್ತಿಲ್ಲ. ಆ ಬಗ್ಗೆ ಪೊಲೀಸರು ನನ್ನನ್ನು ವಿಚಾರಿಸಿಲ್ಲ ಮತ್ತು ನಾನು ಅವರಿಗೆ ಯಾವುದೇ ಮಾಹಿತಿಯನ್ನು ನೀಡಿಲ್ಲ. ಮಗು ಪ್ರೀತಮ್ ಗೆ ಹುಷಾರಿಲ್ಲದ ಕಾರಣ ತರೀಕೆರೆಯ ಬಸವೇಶ್ವರ ಆಸ್ಪತ್ರೆಯಲ್ಲಿ ಆರೋಪಿ ಮತ್ತು ಚಾಸಾ.1 ರವರು ದಾಖಲು ಮಾಡಿದ್ದಾಗಿ ಚಾಸಾ.1 ರವರಿಂದ ತಿಳಿಯಿತು. ನಾನು ನೋಡಿದಾಗ ಮಗು ಪ್ರೀತಮ್ ನ ಬಲಕೈನಲ್ಲಿ ಡ್ರಿಪ್ ಕೆನಾಲ್ ಇತ್ತು. ಶವ ಸಂಸ್ಕಾರಕ್ಕೆ ಮಗುವಿನ ಶವವನ್ನು ಕೊಡುವ ಸಮಯದಲ್ಲಿ ಪೊಲೀಸರು ಸದರಿ ಸಹಿಗಳನ್ನು ಪಡೆದುಕೊಂಡಿದ್ದಾರೆ.

4. ಸಾಕ್ಷಿಗೆ ಎರಡು ದಾಖಲೆಗಳನ್ನು ತೋರಿಸಲಾಗಿ ಅವುಗಳಲ್ಲಿರುವ ತನ್ನ ಸಹಿಗಳನ್ನು ನೋಡಿ ಗುರುತಿಸಿರುತ್ತಾರೆ. ಸದರಿ ದಾಖಲೆಯುದಿನಾಂಕ 05.11.2019 ರಂದು ಶವ ಪಂಚನಾಮೆಗೆ ಸಹಕರಿಸಲು ಪೊಲೀಸರು ನೀಡಿದ್ದಾರೆ ಎಂದು ಹೇಳಲಾದ ನೋಟೀಸು ಮತ್ತು ಸಾಕ್ಷಿಯ ಸಮಕ್ಷಮ

ಪೊಲೀಸರು ಜರುಗಿಸಿದ್ದಾರೆ ಎಂದು ಹೇಳಲಾದ ಶವ ಪಂಚಾಮೆಯಾಗಿದ್ದು ಅವುಗಳನ್ನು ನಿಪಿ.1 ಮತ್ತು ನಿಪಿ.2 ಎಂದು ಅವುಗಳಲ್ಲಿರುವ ಸಾಕ್ಷಿಯ ಸಹಿಗಳನ್ನು ನಿಪಿ.1(ಎ) ಮತ್ತು ನಿಪಿ.2(ಎ) ಎಂದು ಗುರುತಿಸಲಾಯಿತು.

5. ಸಾಕ್ಷಿಗೆ ಎರಡು ಫೋಟೋಗಳನ್ನು ತೋರಿಸಲಾಗಿ ಅವುಗಳ ಪೈಕಿ ಒಂದರಲ್ಲಿ ತನ್ನ ಇರುವಿಕೆಯನ್ನು ನೋಡಿ ಗುರುತಿಸಿ ಅವುಗಳನ್ನು ತರೀಕೆರೆ ಸರ್ಕಾರಿ ಆಸ್ಪತ್ರೆಯ ಶವಾಗಾರದಲ್ಲಿ ಪೊಲೀಸರು ತೆಗೆದುಕೊಂಡಿದ್ದಾಗಿ ನುಡಿದಿರುತ್ತಾರೆ. ಸದರಿ ಫೋಟೋದಲ್ಲಿ ತನ್ನೊಂದಿಗೆ ಚಾಸಾ.1 ರವರು ಇರುವುದಾಗಿ ನುಡಿದು ಅದರಲ್ಲಿ ಮಗು ಪ್ರೀತಮ್ ನ ಮೃತದೇಹವಿರುವುದಾಗಿ ನುಡಿದಿರುತ್ತಾರೆ. ಸದರಿ ಫೋಟೋಗಳನ್ನು ನಿಪಿ.3 ಮತ್ತು ನಿಪಿ.4 ಎಂದು ಗುರುತಿಸಲಾಯಿತು.

6. ಆರೋಪಿ ಮಾನಸಿಕವಾಗಿ ಖಿನ್ನತೆಗೆ ಒಳಗಾಗಿದ್ದಾಗಿ ಮತ್ತು ಆಕೆಗೆ ಮಾನಸಿಕ ಸ್ಥಿರತೆ ಇಲ್ಲದಿದ್ದ ಬಗ್ಗೆ ಚಾಸಾ.1 ರವರು ನನಗೆ ಹೇಳುತ್ತಿದ್ದರು.

(ಈ ಹಂತದಲ್ಲಿ ಸಾಕ್ಷಿಯನು ಭಾಗಶಃ ಪ್ರತಿಕೂಲ ಸಾಕ್ಷಿಯನ್ನಾಗಿ ಪರಿಗಣಿಸಿ ಪಾಟೀ ಸವಾಲು ಮಾಡಲು ಮಾನ್ಯ ಅಭಿಯೋಜಕರು ಅನುಮತಿ ಕೇಳಿರುತ್ತಾರೆ ದಾಖಲೆಗಳನು ಪರಿಶೀಲಿಸಿ ಅನುಮತಿ ನೀಡಲಾಯಿತು)

<u>ಪಾಟೀ ಸವಾಲುಃ ಸರ್ಕಾರಿ ಅಭಿಯೋಜಕರಿಂದಃ-</u>

7. ದಿನಾಂಕ 04.11.2019 ರಂದು ಮಗು ಪ್ರೀತಮ್ ಗೆ ಕೆಮ್ಮು ಮತ್ತು ಶೀತ ಜಾಸ್ತಿಯಾಗಿ ಅದಕ್ಕೆ ಉಸಿರಾಟದ ತೊಂದರೆಯಾಗಿದ್ದರಿಂದ ಚಾಸಾ.1 ಮತ್ತು ಆರೋಪಿ ಮಗುವನ್ನು ತರೀಕೆರೆಯ ಬಸವೇಶ್ವರ ಆಸ್ಪತ್ರೆಗೆ ದಾಖಲಿಸಿದ್ದಾಗಿ

ತಿಳಿಯಿತು ಎಂದರೆ ಸರಿ. ದಿನಾಂಕ 05.11.2019 ರಂದು ಬೆಳಿಗ್ಗೆ 10.00 ಗಂಟೆ ಸಮಯದಲ್ಲಿ ಮಗು ತುಂಬಾ ಅಳುತ್ತಿದ್ದರಿಂದ ಚಾಸಾ.1 ರವರು ಮಗುವನ್ನು ಎತ್ತಿಕೊಂಡು ಸಮಾಧಾನಪಡಿಸಲು ಪ್ರಯತ್ನಿಸುತ್ತಿದ್ದಾಗ ಆರೋಪಿ ತನ್ನ ಮಗುವನ್ನು ಸಮಾಧಾನಪಡಿಸುವುದಾಗಿ ಹೇಳಿ ಮಗುವನ್ನು ಆಸ್ಪತ್ರೆಯಿಂದ ಹೊರಗೆ ಕರೆದುಕೊಂಡು ಹೋಗಿದ್ದಾಗಿ ತಿಳಿಯಿತು ಎಂದರೆ ಸರಿಯಲ್ಲ. ಆ ರೀತಿ ಹೋದ ಆರೋಪಿ ಮದ್ಯಾಹ್ನ 12.00 ಗಂಟೆಯಾದರೂ ಬರದೇ ಇದ್ದ ಕಾರಣ ಚಾಸಾ.1 ರವರು ಗಾಬರಿಯಾಗಿ ಬೀರೂರು ಕಡೆ ರಸ್ತೆಯಲ್ಲಿ ಆರೋಪಿ ಮತ್ತು ಮಗುವನ್ನು ಹುಡುಕಿಕೊಂಡು ಹೋಗಿದ್ದಾಗಿ ತಿಳಿಯಿತು ಎಂದರೆ ಸರಿಯಲ್ಲ. ಆ ಸಮಯದಲ್ಲಿ ಹುಳಿಯಾರು ಕ್ರಾಸ್ ನ ಸಾಮಿಲ್ ನ ಹತ್ತಿರ ಆರೋಪಿ ಒಬ್ಬಳೇ ವಾಪಾಸ್ಸು ಬರುತ್ತಿದ್ದುದ್ದನ್ನು ನೋಡಿ ಚಾಸಾ.1 ರವರು ಆಕೆಯನ್ನು ಕುರಿತು ಮಗು ಎಲ್ಲಿ ಎಂದು ಕೇಳಿದಾಗ ಆಕೆ ಮಗುವನ್ನು ಯಾರೋ ಚಾನಲ್ ಗೆ ಹಾಕು ಎಂದು ಹೇಳಿದಂತೆ ಆಗಿದ್ದರಿಂದ ಆಕೆ ಮಗುವನ್ನು ನೀರು ಹರಿಯುತ್ತಿದ್ದ ಚಾನಲ್ ಗೆ ಹಾಕಿದ್ದಾಗಿ ತಿಳಿಸಿದ್ದಾಗಿ ನಿಮಗೆ ತಿಳಿಯಿತು ಎಂದರೆ ಸರಿಯಲ್ಲ. ನಂತರ ಚಾಸಾ.1 ಮತ್ತು ಆರೋಪಿ ಮಗುವನ್ನು ಹುಡುಕಿಕೊಂಡು ಸಂತೆ ದಿಬ್ಬದ ಹತ್ತಿರ ಸೇತುವೆ ಬಳಿ ಹೋದಾಗ ಅಲ್ಲಿ ದೇವಸ್ಥಾನಕ್ಕೆ ಬಂದಿದ್ದ ಜನರು ಯಾವುದೋ ಮಗು ಚಾನಲ್ ನೀರಿನಲ್ಲಿ ತೇಲಿ ಹೋಯಿತು ಎಂದು ಹೇಳಿದ್ದಾಗಿ ತಿಳಿಯಿತು ಎಂದರೆ ಸರಿಯಲ್ಲ. ನಂತರ ಚಾಸಾ.1 ಬೆಟ್ಟದತಾವರೆಕೆರೆ ಪಂಪ್ ಹೌಸ್ ಹತ್ತಿರ ಹೋಗಿ ನೋಡಿದಾಗ ಅಲ್ಲಿ ಮಗು ಪ್ರೀತಮ್ ನ ದೇಹ ನೀರಿನಲ್ಲಿ ತೇಲುತ್ತಿದ್ದುದು ಕಂಡು ಬಂದಿದ್ದಾಗಿ ತಿಳಿಯಿತು

ಎಂದರೆ ಸರಿಯಲ್ಲ. ಆರೋಪಿ ಮಾನಸಿಕ ಖಿನ್ನತೆಗೆ ಒಳಗಾಗಿ ಮಗುವನ್ನು ಸಾಯಿಸಿದ್ದಾಗಿ ತಿಳಿಯಿತು ಎಂದರೆ ಸರಿ.

8. ದಿನಾಂಕ 05.11.2019 ರಂದು ತರೀಕೆರೆ ಸರ್ಕಾರಿ ಆಸ್ಪತ್ರೆಯ ಶವಾಗಾರದಲ್ಲಿ ಮೃತ ಮಗು ಪ್ರೀತಮ್ ನ ಶವಪಂಚನಾಮೆಯನ್ನು ಜರುಗಿಸಲು ಸಹಕರಿಸುವಂತೆ ಪೊಲೀಸರು ನಿಮಗೆ ನಿಪಿ.1 ರಂತೆ ನೋಟೀಸನ್ನು ಜಾರಿ ಮಾಡಿದ್ದರು ಎಂದರೆ ಸರಿ. ಅದರಂತೆ ನೀವು ಸದರಿ ಆಸ್ಪತ್ರೆಯ ಶವಾಗಾರದಲ್ಲಿ ಹಾಜರಿದ್ದಿರಿ ಎಂದರೆ ಸರಿ. ಸದರಿ ಆಸ್ಪತ್ರೆಯ ಶವಾಗಾರದಲ್ಲಿ ಅದೇ ದಿನ ಅಂದರೆ ದಿನಾಂಕ 05.11.2019 ರಂದು ಸಂಜೆ 7.00 ಗಂಟೆಯಿಂದ ರಾತ್ರಿ 9.15 ಗಂಟೆಯವರೆಗೆ ಪೊಲೀಸರು ನಿಮ್ಮ ಸಮಕ್ಷಮ ಪ್ರೀತಮ್ ನ ಮೃತದೇಹದ ಮೇಲೆ ಶವಪಂಚನಾಮೆಯನ್ನು ಜರುಗಿಸಿದ್ದಾರೆ ಎಂದರೆ ಸರಿ. ಆ ಸಮಯದಲ್ಲಿ ನಿಮಗೆ ಚಾಸಾ.1 ರವರಿಂದ ತಿಳಿದು ಬಂದ ವಿಚಾರವನ್ನು ನೀವು ಪೊಲೀಸರಿಗೆ ತಿಳಿಸಿದ್ದೀರಿ ಎಂದರೆ ಸರಿ.

ಪಾಟೀ ಸವಾಲುಃ ಶ್ರೀ ಆರ್ ಎಸ್ ವಕೀಲರಿಂದಃ ಆರೋಪಿ ಪರವಾಗಿಃ

9. ಆರೋಪಿ ತನ್ನ ಗಂಡ ಮತ್ತು ಅತ್ತೆಯೊಂದಿಗೆ ಅನ್ಯೂನ್ಯವಾಗಿದ್ದರು ಎಂದರೆ ಸರಿ. ಆರೋಪಿ ಪದೇ ಪದೇ ಮಾನಸಿಕ ಖಿನ್ನತೆಗೆ ಒಳಗಾಗುತ್ತಿದ್ದು ಆ ಬಗ್ಗೆ ಆಕೆ ಚಿಕಿತ್ಸೆ ಪಡೆದುಕೊಳ್ಳುತ್ತಿದ್ದಳು ಎಂದರೆ ಸರಿ. ಆರೋಪಿ ಮೊದಲನೇ ಮಗುವಿಗೆ ಜನ್ಮ ನೀಡಿದ ಸಮಯದಲ್ಲಿ ಆಕೆ ಅತಿಯಾದ ಮಾನಸಿಕ ಖಿನ್ನತೆಗೆ ಒಳಗಾಗಿದ್ದಳು ಎಂದರೆ ಸರಿ. ಬಾಣಂತಿ ಸಮಯದಲ್ಲಿ ಆರೋಪಿ ಮಾನಸಿಕ ಖಿನ್ನತೆಗೆ ಒಳಗಾಗಿದ್ದರಿಂದ ಆಕೆ ತನ್ನ ಮೊದಲನೇ

ಮಗುವನ್ನು ಸರಿಯಾಗಿ ನೋಡಿಕೊಳ್ಳುತ್ತಿರಲಿಲ್ಲವೆಂದು ನಿಮಗೆ ತಿಳಿದಿತ್ತು ಎಂದರೆ ಸಾಕ್ಷಿ ಚಾಸಾ.1 ರವರು ನನಗೆ ಆ ವಿಚಾರವನ್ನು ಹೇಳುತ್ತಿದ್ದರು ಎನ್ನುತ್ತಾರೆ. ಸ್ಥಳ ಬದಲಾವಣೆಯಾದರೆ ಆರೋಪಿಯ ಮಾನಸಿಕ ಸ್ಥಿತಿ ಸುಧಾರಿಸಬಹುದೆಂದು ಆಕೆಯನ್ನು ತನ್ನ ಗಂಡನೊಂದಿಗೆ ಸ್ವಲ್ಪ ದಿನಗಳ ಕಾಲ ಬೆಂಗಳೂರಿನಲ್ಲಿ ಇರಿಸಲಾಗಿತ್ತು ಎಂದರೆ ಸರಿ. ಆಕೆ 2 ನೇ ಮಗುವಿಗೆ ಗರ್ಭಿಣಿಯಾದಾಗ ಆಕೆಯನ್ನು ಊರಿಗೆ ಕರೆದುಕೊಂಡು ಬರಲಾಗಿತ್ತು ಎಂದರೆ ಸರಿ.

10. ಆರೋಪಿ 2 ನೇ ಮಗುವಿಗೆ ಜನ್ಮ ನೀಡಿದ ಬಳಿಕ ಆಕೆಗೆ ಹಿಂದೆ ಇದ್ದ ಮಾನಸಿಕ ಅಸ್ವಸ್ಥತೆಗಿಂತ ಹೆಚ್ಚಾಗಿ ಖಿನ್ನತೆಗೆ ಒಳಗಾಗಿದ್ದಳು ಎಂದರೆ ಸರಿ. ಆಕೆಗೆ ತನ್ನ ಮಗುವನ್ನು ಹೇಗೆ ನೋಡಿಕೊಳ್ಳಬೇಕು ಎಂದು ಗೊತ್ತಾಗುತ್ತಿರಲಿಲ್ಲ ಹಾಗಾಗಿ ಆಕೆಯ ಎರಡನೇ ಮಗುವನ್ನೂ ಸಹ ಚಾಸಾ.1 ರವರೆ ನೋಡಿಕೊಳ್ಳುತ್ತಿದ್ದರು ಎಂದರೆ ಸರಿ. 2 ನೇ ಮಗುವಿಗೆ ಜನ್ಮ ನೀಡಿದ ಬಳಿಕ ಆರೋಪಿಯ ಮಾನಸಿಕ ಖಿನ್ನತೆಯ ಬಗ್ಗೆ ಆಕೆಗೆ ಬೆಂಗಳೂರು ಮತ್ತು ಶಿವಮೊಗ್ಗದ ಮೆಗ್ಗಾನ್ ಆಸ್ಪತ್ರೆಗಳಲ್ಲಿ ಚಿಕಿತ್ಸೆ ಕೊಡಿಸಲಾಗಿತ್ತು ಎಂದರೆ ಸರಿ.

11. ಪೊಲೀಸರು ನನಗೆ ಫೋನ್ ಮಾಡಿ ಶವಪಂಚನಾಮೆಗೆ ಹಾಜರಿರುವಂತೆ ತಿಳಿಸಿಲ್ಲ. ನನ್ನ ಸಮಕ್ಷಮ ಪೊಲೀಸರು ಯಾವುದೇ ಬರವಣಿಗೆಯನ್ನು ಮಾಡಿಲ್ಲ ಹಾಗಾಗಿ ನಿಪಿ.1 ಮತ್ತು ನಿಪಿ.2 ರ ದಾಖಲೆಗಳಲ್ಲಿ ಬರೆದಿರುವ ವಿಚಾರಗಳು ಗೊತ್ತಿಲ್ಲ. ನಾನು ಬೆಂಗಳೂರಿನಿಂದ ಬಂದಾಗ ಆರೋಪಿ ಮಾನಸಿಕ ಖಿನ್ನತೆಯಿಂದ ತನ್ನ ಮಗು ಪ್ರೀತಮ್ ನನ್ನು ಚಾನಲ್

ಗೆ ಚಾಸಾ.1 ರವರಿಂದ ತಿಳಿಯಿತು. ಆ ಬಗ್ಗೆ ನಾನು ಆರೋಪಿಯನ್ನು ಮಾತನಾಡಿಸಿಲ್ಲ.

<u>ಮರು ವಿಚಾರಣೆ ಇಲ್ಲಃ</u>

(ನನ್ನ ಉಕ್ತಲೇಖನಕ್ಕೆ ತೆರೆದ ನ್ಯಾಯಾಲಯದಲ್ಲಿ ಬೆರಳಚ್ಚು ಮಾಡಲಾಯ್ತು)

ಓ.ಹೇ.ಕೇ.ಸ.ಇ.ಎ.ಒ.

ಸಹಿ/-
(ಭಾನುಮತಿ ಬಿ.ಸಿ)
2 ನೇ ಅಪರ ಜಿಲ್ಲಾ ಮತ್ತು ಸತ್ರ ನ್ಯಾಯಾಧೀಶರು,
ಚಿಕ್ಕಮಗಳೂರು.

ಸಾಕ್ಷಿಯ ಸಹಿ

ಹೇಮಾ.